ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಏಪ್ರಿಲ್ ತಿಂಗಳ ಸೇವಾ ಕಾರ್ಯಗಳ ಸಂಕ್ಷಿಪ್ತ ವರದಿ

# ಸೇವಾವಾಣಿ

"ಸೇವೆಯ ಸಂದೇಶ, ಸಮಾಜದ ಸ್ಪಂದನ"

## ಮಾಸಿಕ ಸುದ್ದಿಪತ್ರಿಕೆ

### ಏಪ್ರಿಲ್ ತಿಂಗಳ ಸುದ್ದಿಗಳು

**"ಪ್ರೀತಿಯಿಂದ ಮಾಡಿದ ಸಣ್ಣ ಕಾರ್ಯಗಳೇ ದೊಡ್ಡ ಬದಲಾವಣೆಗೆ ಕಾರಣ."**

ಮೇ ತಿಂಗಳ ಸೇವಾವಾಣಿ [illegible], ಏಪ್ರಿಲ್ ತಿಂಗಳಲ್ಲಿ ನಮ್ಮ ಸಂಸ್ಥೆಯು ಕೈಗೊಂಡ ಪ್ರ[illegible]ವಾ ಕಾರ್ಯಗಳು ಹಾಗೂ ಸಮುದಾಯದಲ್ಲಿ ಮೂಡಿದ ಸಕಾರಾತ್ಮಕ ಬದಲಾವಣೆಗಳ ಸಂಕ್ಷಿಪ್ತ ಪರಿಚಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ.

# Stay Connected.
# BE THE CHANGE.

**Follow Us. Support Us. Transform Lives.**

Together, we can build a stronger, kinder and empowered society.
Connect with us, follow our journey and be a part of the change.
Your support today creates a **better tomorrow**.

## ORBIT

Organization of
Bidar Integral Transformation

Bidar

**FOLLOW US ON**

- Facebook: @Orbit Bidar- Organization of Bidar Integral Transformation- NGO
- Instagram: @Orbitbidar
- Website: www.orbitbidar.in
- YouTube: @orbithumnabad

**GET IN TOUCH** For Collaborations, Volunteering, Donations & More.

*Let's create impact together!*

## SEVA SANGAMA

Development Society, Kalaburagi

**FOLLOW US ON**

- Facebook: @Sevasangama Kalaburagi Non-Government Organization
- Instagram: @sevasangama01
- Website: www.sevasangama.in
- Phone: 897 111 9914

**GET IN TOUCH** For Collaborations, Volunteering, Donations & More.

*Let's create impact together!*

## BE A PART OF SOMETHING BIGGER!

- Follow our journey
- Support our cause
- Share our mission
- Spread the word
- Make a difference

*Small Actions, Big Impact.*

## TOGETHER WE CAN...

- Empower Lives
- Build Strong Communities
- Create Opportunities
- Inspire Change
- Transform Futures

# “ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ”

## “ಆರ್ಬಿಟ್ ಸಂಸ್ಥೆಯ ನೆರವಿನಿಂದ ಬದುಕು ಕಟ್ಟಿಕೊಂಡ ವಿಜಯಕುಮಾರ್”



೨೧ ಏಪ್ರಿಲ್ ೨೦೨೬ ರಂದು ಹುಮ್ನಾಬಾದ್ ತಾಲೂಕಿನ ಜಿರ್ಪೆಟ್ ಗಲ್ಲಿಯ ಫಲಾನುಭವಿಯಾದ ವಿಜಯಕುಮಾರ್ ತಂದೆ ಶಂಕರಪ್ಪ ಅವರು ಕಳೆದ ಮೂರು ವರ್ಷಗಳಿಂದ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದರು. ಒಂದು ದಿನ ಸರ್ವೆ ಕಾರ್ಯದ ವೇಳೆ ಇವರ ಮನೆಗೆ ಭೇಟಿ ನೀಡಿ, ವಿಜಯಕುಮಾರರನ್ನು ಡಿ.ಎಮ್.ಎಚ್.ಪಿ ಶಿಬಿರಕ್ಕೆ ಕರೆತರುವ ಕುರಿತು ಕುಟುಂಬದವರಿಗೆ ಮಾಹಿತಿ ನೀಡಲಾಯಿತು. ನಂತರ ಇವರು ಸರ್ಕಾರಿ ಆಸ್ಪತ್ರೆಯಲ್ಲಿ ಎರಡು ವರ್ಷಗಳ ಕಾಲ ಉತ್ತಮ ರೀತಿಯಲ್ಲಿ ಚಿಕಿತ್ಸೆ ಪಡೆದುಕೊಂಡು ಇದೀಗ ಸಂಪೂರ್ಣ ಗುಣಮುಖರಾಗಿದ್ದಾರೆ. ಇದಲ್ಲದೆ, ಆರ್ಬಿಟ್ ಸಂಸ್ಥೆಯಿಂದ ಜೀವನೋಪಾಯಕ್ಕಾಗಿ ಎರಡು ಕುರಿಗಳನ್ನು ನೀಡಲಾಗಿದೆ. ಈಗ ಅವರು ಕುರಿ ಸಾಕಾಣಿಕೆಯನ್ನು ಉತ್ತಮವಾಗಿ ನಿರ್ವಹಿಸಿಕೊಂಡು ತಮ್ಮ ಜೀವನವನ್ನು ಸುಧಾರಿತ ರೀತಿಯಲ್ಲಿ ನಡೆಸುತ್ತಿದ್ದಾರೆ ಎಂದು ಸಂತೋಷ ವ್ಯಕ್ತಪಡಿಸಿದ್ದಾರೆ. ನನಗೆ ಸಹಾಯ ಮಾಡಿದ ಆರ್ಬಿಟ್ ಸಂಸ್ಥೆಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.



### “ಅಂಗವಿಕಲರ ಹಕ್ಕು ಮತ್ತು ಸೌಲಭ್ಯಗಳ ಕುರಿತು ಮಾಹಿತಿ”

೦೭ ಮೇ ೨೦೨೬ರಂದು ಹುಮನಾಬಾದ್ ತಾಲೂಕಿನ ಚಂದನಹಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಜೈ ಲಕ್ಷ್ಮೀ ವಿಶೇಷ ವಿಕಲಚೇತನರ ಸಂಘದ ಸಭೆಯು ಯಶಸ್ವಿಯಾಗಿ ನೆರವೇರಿತು. ಈ ಸಭೆಗೆ ಆರ್ಬಿಟ್ ಸಂಸ್ಥೆಯ ನವಜೀವನ ಆರ್ಬಿಟ್ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಪೂಜಾ ರವರು ಸಭೆಯ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿದರು. ಅಂಗವಿಕಲರ ಸೌಲಭ್ಯ, ಆರೋಗ್ಯ ಸೇವೆಗಳು, ಶಿಕ್ಷಣ ಹಾಗೂ ಸಾರಿಗೆ ಸೌಲಭ್ಯಗಳ ಬಗ್ಗೆ ಸದಸ್ಯರು ತಮ್ಮ ಅಗತ್ಯಗಳನ್ನು ತಿಳಿಸಿದರು. ಸರ್ಕಾರ ನೀಡುತ್ತಿರುವ ವಿವಿಧ ಯೋಜನೆಗಳ ಮಾಹಿತಿಯನ್ನು ವಿತರಣೆ ಮಾಡಿದರು. ಯುಡಿಐಡಿ ಕಾರ್ಡ್, ಡಿಸೆಬಿಲಿಟಿ ಪೆನ್ಷನ್ ಹಾಗೂ ಸಹಾಯಕ ಉಪಕರಣಗಳ ವಿತರಣೆಯ ಕುರಿತು ತಿಳಿಸಿದರು. ಚಿಕಿತ್ಸೆ ಮತ್ತು ಪುನರ್ವಸತಿ ಸಂಬಂಧಿಸಿದ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು. ಪೋಷಕರಿಗೆ ಮಾರ್ಗದರ್ಶನ, ಮಕ್ಕಳ ಆರೈಕೆ, ವಿದ್ಯಾಭ್ಯಾಸ, ಥೆರಪಿ ಹಾಗೂ ದಿನನಿತ್ಯದ ಸಹಾಯಗಾರಿಕೆ ಬಗ್ಗೆ ಸಲಹೆ ನೀಡಲಾಯಿತು. ಒಟ್ಟು ೦೫ ಜನ ಫಲಾನುಭವಿಗಳು ಮತ್ತು ಪೋಷಕರು ಭಾಗವಹಿಸಿದ್ದರು.



### “ಮಾನಸಿಕ ಅಸ್ವಸ್ಥರಿಗೆ ಧೈರ್ಯ ತುಂಬಿದ ಆಪ್ತ ಸಮಾಲೋಚನೆ”

೦೭ ಏಪ್ರಿಲ್ ೨೦೨೬ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದ ಫಲಾನುಭವಿಗೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಕಂಠಿ ಅವರಿಂದ ಆಪ್ತ ಸಮಾಲೋಚನೆ ನೀಡಲಾಯಿತು. ವೈದ್ಯರ ಸಲಹೆ ಮೇರೆಗೆ ಮಾತ್ರೆಗಳನ್ನು ನಿಯಮಿತವಾಗಿ ಸೇವಿಸಬೇಕು ಹಾಗೂ ಇತರರೊಂದಿಗೆ ಬೆರೆಯುವುದರ ಜೊತೆಗೆ ದಿನನಿತ್ಯದ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ಖಿನ್ನತೆಯಿಂದ ಹೊರಬರಲು ಸಾಧ್ಯವಾಗುತ್ತದೆ ಎಂದು ತಿಳಿಸಲಾಯಿತು.

# “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ಸರಿಯಾದ ಪೌಷ್ಟಿಕತೆ ಮಗುವಿನ ಬೆಳವಣಿಗೆಯ ಮೂಲಾಧಾರ”



೨೧ ಏಪ್ರಿಲ್ ೨೦೨೫ರಂದು ಹುಮ್ನಾಬಾದ್ ತಾಲೂಕಿನ ಗೋಡವಾಡಿ ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ಭಾಗವಹಿಸಿದರು. ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಹೇಗೆ ಶೀಘ್ರವಾಗಿ ಪತ್ತೆಹಚ್ಚಬೇಕು ಎಂಬುದರ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ನವಜಾತ ಶಿಶು ಹುಟ್ಟಿದಾಗ ಅಳದೆ ಇರುವುದು, ಮಗುವಿನ ತೂಕ ಕಡಿಮೆ ಇರುವುದು, ತಲೆ ದೊಡ್ಡದಾಗಿರುವುದು ಅಥವಾ ಸಣ್ಣದಾಗಿರುವುದು, ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸದೆ ಇರುವುದು ಮುಂತಾದ ಲಕ್ಷಣಗಳಿಂದ ಮಗುವಿನ ಬೆಳವಣಿಗೆಯಲ್ಲಿ ಕುಂಠಿತ ಇರುವುದನ್ನು ಗುರುತಿಸಬಹುದು ಎಂದು ತಿಳಿಸಿದರು. ಜೊತೆಗೆ ಮಗು ತಾಯಿಯ ಎದೆಹಾಲು ಕುಡಿಯುವಲ್ಲಿ ತೊಂದರೆ ಅನುಭವಿಸಿದರೆ, ಪೌಷ್ಟಿಕ ಆಹಾರ ಮತ್ತು ಸೂಕ್ತ ಚಟುವಟಿಕೆಗಳ ಮೂಲಕ ಮಗುವಿನ ಬೆಳವಣಿಗೆಯಲ್ಲಿ ಉತ್ತಮ ಬದಲಾವಣೆ ತರಬಹುದು ಎಂದು ಹೇಳಿದರು. ಕರ್ನಾಟಕ ಸರ್ಕಾರದಿಂದ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗಾಗಿ ವಿವಿಧ ಯೋಜನೆಗಳು ಜಾರಿಯಲ್ಲಿದ್ದು, ಪೌಷ್ಟಿಕ ಆಹಾರ ಹಾಗೂ ನಿಯಮಿತ ಚುಚ್ಚುಮದ್ದುಗಳ ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಲಾಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ತಾಯಿ ಮತ್ತು ಮಕ್ಕಳಿಗಾಗಿ ಇರುವ ವಿವಿಧ ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕೆಂದು ಸಮುದಾಯ ಆರೋಗ್ಯ ಅಧಿಕಾರಿಗಳಾದ ಜಯಪ್ರದರ್ ಅವರು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು ೧೦ ಜನ ಆರೋಗ್ಯ ಇಲಾಖೆ ಸಿಬ್ಬಂದಿಗಳು ಭಾಗವಹಿಸಿದ್ದರು.

---

## “ವಿಶೇಷ ಮಕ್ಕಳ ಕನಸುಗಳಿಗೆ ಬೆಂಬಲವಾಗೋಣ”



೦೭ ಏಪ್ರಿಲ್ ೨೦೨೫ರಂದು ಹುಮನಾಬಾದ್ ತಾಲೂಕಿನ ಸಿತ್ತಾಳಗೇರಾ ಗ್ರಾಮ ಪಂಚಾಯಿತಿಯಲ್ಲಿ ಆರ್ಬಿಟ್ ಸಂಸ್ಥೆಯ “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”ದ ವತಿಯಿಂದ ವಿಶೇಷ ವಿಕಲಚೇತನ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ವಿಕಲತೆಯ ಕಾರಣಗಳು, ಮಕ್ಕಳ ಆರೋಗ್ಯದ ಬಗ್ಗೆ ಪೋಷಕರು ಗಮನಹರಿಸುವ ಅಗತ್ಯತೆ ಹಾಗೂ ಸರ್ಕಾರದಿಂದ ದೊರೆಯುವ ಯುಡಿಐಡಿ (UDID) ಕಾರ್ಡ್ ಸೇರಿದಂತೆ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮದ ಸದಸ್ಯರು ಸೇರಿ ಒಟ್ಟು ೨೬ ಜನ ಉಪಸ್ಥಿತರಿದ್ದರು.

---

## “ಆಟ ಮತ್ತು ಕಲಿಕೆಯ ಮೂಲಕ ಮಕ್ಕಳಿಗೆ ತರಬೇತಿ”



೧೧ ಏಪ್ರಿಲ್ ೨೦೨೫ರಂದು ಹುಮನಾಬಾದ್ ನಗರದ ಹೊರವಲಯದ ಆರ್ಬಿಟ್ ಸಂಸ್ಥೆ ಕೇಂದ್ರದಲ್ಲಿ “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”ದ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಬೆಳವಣಿಗೆಯಲ್ಲಿ ಕುಂಠಿತಗೊಂಡ ಮಕ್ಕಳಿಗೆ ಕೇಂದ್ರ ಆಧಾರಿತ ಚಟುವಟಿಕೆಗಳನ್ನು ನಡೆಸಿದರು.

ಪೋಷಕರ ಸಹಯೋಗದೊಂದಿಗೆ ನಡೆಯಲು ಸಾಧ್ಯವಾಗದ ಮಗುವಿಗೆ ಕಾಲಿನ ಚಲನವಲನ, ಸಹಾಯದಿಂದ ನಿಲ್ಲುವಿಕೆ ಹಾಗೂ ಗೊಂಬೆಗಳ ಮೂಲಕ ಆಟದ ಚಟುವಟಿಕೆಗಳನ್ನು ಮಾಡಿಸಲಾಯಿತು. ಚಪ್ಪಾಳೆಯ ಶಬ್ದದ ಮೂಲಕ ಎಡ-ಬಲಕ್ಕೆ ತಿರುಗಿ ನೋಡುವ ಚಟುವಟಿಕೆಯನ್ನೂ ನಡೆಸಲಾಯಿತು. ಇನ್ನೊಬ್ಬ ಮಗುವಿಗೆ ದಿನನಿತ್ಯದ ಚಟುವಟಿಕೆಗಳ ಬಗ್ಗೆ ತಿಳಿಸುವುದು, ಬಣ್ಣಗಳನ್ನು ಗುರುತಿಸಿ ಜೋಡಿಸುವುದು, ಪ್ರಾಣಿಗಳ ಚಿತ್ರಗಳನ್ನು ಗುರುತಿಸಿ ಹೆಸರು ಹೇಳಿಸುವುದು ಹಾಗೂ ತರಕಾರಿಗಳನ್ನು ಗುರುತಿಸುವ ಚಟುವಟಿಕೆಗಳನ್ನು ಮಾಡಿಸಲಾಯಿತು.

# “ಮಹಿಳಾ ಸಬಲೀಕರಣ ಕಾರ್ಯಕ್ರಮ”

## “ಮಹಿಳೆಯರಲ್ಲಿ ನಾಯಕತ್ವ ಗುಣ ಬೆಳೆಸುವ ಕಾರ್ಯಾಗಾರ”





### “ಆತ್ಮವಿಶ್ವಾಸವೇ ಮಹಿಳೆಯ ಅತ್ಯುತ್ತಮ ಆಭರಣ”

೨೦ ಏಪ್ರಿಲ್ ೨೦೨೬ರಂದು ಗುಡ್ವಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳ ಸದಸ್ಯರಿಗೆ ನಾಯಕತ್ವ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸುಜಾತಾ ಸಂತಪೂರ ರವರು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಒಟ್ಟು ೧೫ ಸದಸ್ಯರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ನಾಯಕತ್ವದ ಮಹತ್ವ, ಉತ್ತಮ ನಾಯಕನ ಗುಣಗಳು ಹಾಗೂ ಮಹಿಳೆಯರು ತಮ್ಮ ಜೀವನದ ವಿವಿಧ ಕ್ಷೇತ್ರಗಳಲ್ಲಿ ಹೇಗೆ ನಾಯಕತ್ವ ವಹಿಸಬೇಕು ಎಂಬುದರ ಕುರಿತು ಮಾಹಿತಿ ನೀಡಲಾಯಿತು. ಮಹಿಳೆಯರ ಹಕ್ಕುಗಳ ಬಗ್ಗೆ ಅರಿವು ಮೂಡಿಸಿ, ತಮ್ಮ ಹಕ್ಕುಗಳನ್ನು ಪಡೆಯಲು ಧೈರ್ಯವಾಗಿ ಮುಂದೆ ಬರಬೇಕು ಹಾಗೂ ಅನ್ಯಾಯಗಳ ವಿರುದ್ಧ ಹೋರಾಡಬೇಕು ಎಂದು ತಿಳಿಸಲಾಯಿತು. ಪ್ರಾಯೋಗಿಕವಾಗಿ ಸದಸ್ಯರಿಗೆ ಗುಂಪಿನಲ್ಲಿ ಮಾತನಾಡುವ ಆತ್ಮವಿಶ್ವಾಸ ಬೆಳೆಸುವುದು, ಸಭೆಗಳನ್ನು ಸಮರ್ಪಕವಾಗಿ ನಡೆಸುವುದು, ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು ಹಾಗೂ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಹಿಡಿಯುವ ಕುರಿತು ತರಬೇತಿ ನೀಡಲಾಯಿತು. ಜೊತೆಗೆ ಸರ್ಕಾರದ ಯೋಜನೆಗಳ ಸದುಪಯೋಗ ಪಡೆಯುವುದು, ಬ್ಯಾಂಕ್ ವ್ಯವಹಾರಗಳನ್ನು ನಿರ್ವಹಿಸುವುದು ಹಾಗೂ ಸಮೂಹದ ಏಕತೆಯನ್ನು ಕಾಪಾಡಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡಲಾಯಿತು. ಈ ತರಬೇತಿಯಿಂದ ಸದಸ್ಯರಲ್ಲಿ ಆತ್ಮವಿಶ್ವಾಸ ಹೆಚ್ಚಾಗಿ, ಸಮಾಜದಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೇರಣೆ ದೊರೆಯಿತು. ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಆತ್ಮವಿಶ್ವಾಸದಿಂದ ಮುಂದೆ ಬರಬೇಕೆಂಬ ಅರಿವು ಮೂಡಿಸಲಾಯಿತು.

### “ನಾಯಕತ್ವ ಗುಣಗಳ ಕುರಿತು ತರಬೇತಿ”



೧೭ ಏಪ್ರಿಲ್ ೨೦೨೬ರಂದು ಭಾಲ್ಕಿ ತಾಲೂಕಿನ ಮುರಾಳ ಗ್ರಾಮದ ಕಿರಣ್ ಜ್ಯೋತಿ ಮಹಾಸಂಘದಲ್ಲಿ ನಾಯಕತ್ವ ಗುಣಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಶ್ರೀಮತಿ ವಿಮಲಾಬಾಯಿ ಅವರು ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕರ್ತರಾದ ಶ್ರೀ ಪ್ರಭು ರವರು ಪ್ರಶ್ನೋತ್ತರಗಳ ಮೂಲಕ ನಾಯಕತ್ವದ ಪರಿಕಲ್ಪನೆಯನ್ನು ವಿವರಿಸಿದರು. ಉತ್ತಮ ನಾಯಕನ ಗುಣಲಕ್ಷಣಗಳು, ಸೇವಾ ಮನೋಭಾವ ಹಾಗೂ ನಿಸ್ವಾರ್ಥ ಸೇವೆಯ ಮಹತ್ವದ ಕುರಿತು ಮಾಹಿತಿ ನೀಡಲಾಯಿತು. “ಜನರ ಏಳಿಗೆಗಾಗಿ ದುಡಿಯುವವನೇ ನಿಜವಾದ ನಾಯಕ. ಇಂತಹ ಗುಣಗಳನ್ನು ಬೆಳೆಸಿಕೊಂಡರೆ ಕುಟುಂಬ ಹಾಗೂ ಗ್ರಾಮ ಮಟ್ಟದಲ್ಲಿ ಉತ್ತಮ ನಾಯಕರಾಗಿ ಹೊರಹೊಮ್ಮಬಹುದು” ಎಂದು ಅವರು ತಿಳಿಸಿದರು. ಮುಂಬರುವ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಪ್ರೇರೇಪಿಸಲಾಯಿತು. ಸಭೆಯಲ್ಲಿ ಭಾಗವಹಿಸಿದ್ದ ೧೨ ಮಹಿಳೆಯರು ಮುಂಬರುವ ಚುನಾವಣೆಯಲ್ಲಿ ಇಬ್ಬರು ಸದಸ್ಯರನ್ನು ಸ್ಪರ್ಧಿಸಲು ನಿರ್ಧರಿಸಿದರು. ಕೊನೆಯಲ್ಲಿ ಶ್ರೀಮತಿ ಲತಾ ರವರು ವಂದಿಸಿದರು.

# “ನಾಯಕತ್ವ ಕೌಶಲ್ಯದಿಂದ ಮಹಿಳೆಯರಲ್ಲಿ ಹೊಸ ಆತ್ಮವಿಶ್ವಾಸ”



೧೩ ಏಪ್ರಿಲ್ ೨೦೨೫ರಂದು ಚಿಟ್ಟ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ರೋಸಮರಿ ಅವರು ನವಕೀರ್ತಿ ಸಂಘದ ಮಹಿಳೆಯರಿಗೆ ನಾಯಕತ್ವ ಕುರಿತು ತರಬೇತಿ ನೀಡಿದರು. ತರಬೇತಿಯಲ್ಲಿ ಉತ್ತಮ ನಾಯಕತ್ವ, ಆತ್ಮವಿಶ್ವಾಸ, ಪ್ರಾಮಾಣಿಕತೆ, ನೈತಿಕ ಮೌಲ್ಯಗಳು ಹಾಗೂ ಪರಿಣಾಮಕಾರಿ ಸಂವಹನ ಕೌಶಲ್ಯಗಳ ಕುರಿತು ಮಾಹಿತಿ ನೀಡಲಾಯಿತು. ಜೊತೆಗೆ ಕಠಿಣ ಸಂದರ್ಭಗಳಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವುದು, ತಂಡದ ಸದಸ್ಯರನ್ನು ಪ್ರೇರೇಪಿಸುವುದು ಹಾಗೂ ಅವರ ಭಾವನೆಗಳನ್ನು ಗೌರವಿಸುವ ನಾಯಕತ್ವ ಗುಣಗಳ ಮಹತ್ವವನ್ನು ಮಹಿಳೆಯರಿಗೆ ತಿಳಿಸಲಾಯಿತು.

## “ಮಹಿಳೆಯರ ಸಬಲೀಕರಣಕ್ಕೆ ಲಿಂಗ ಸಮಾನತೆ ಅಗತ್ಯ”

೧೪ ಏಪ್ರಿಲ್ ೨೦೨೫ರಂದು ಭಾಲ್ಕಿ ತಾಲೂಕಿನ ಹುಣಜಿ ಗ್ರಾಮದ ಆತ್ಮ ಜ್ಯೋತಿ ಮಹಾಸಂಘದಲ್ಲಿ ಲಿಂಗ ಸಮಾನತೆ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಶ್ರೀಮತಿ ಶ್ರೀದೇವಿಯವರು ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಇಂದುಮತಿ, ಕಾರ್ಯಕರ್ತರಾದ ಶ್ರೀ ಪ್ರಭು ಹಾಗೂ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು. ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ಇಂದುಮತಿಯವರು ಲಿಂಗ ಸಮಾನತೆಯ ಮಹತ್ವದ ಕುರಿತು ಮಾಹಿತಿ ನೀಡಿ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಸಮಾನ ಶಿಕ್ಷಣ, ಕೆಲಸ ಹಾಗೂ ಜವಾಬ್ದಾರಿಗಳನ್ನು ನೀಡಬೇಕು ಎಂದು ತಿಳಿಸಿದರು. ಲಿಂಗ ಸಮಾನತೆ ಕುಟುಂಬದಿಂದ ಆರಂಭವಾಗಿ ಸಮಾಜದ ಎಲ್ಲಾ ಹಂತಗಳಿಗೆ ವಿಸ್ತರಿಸಬೇಕು ಎಂದು ಹೇಳಿದರು. ಇದರ ಮೂಲಕ ಮಹಿಳೆಯರು ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಸಬಲರಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಲಾಯಿತು. ತರಬೇತಿಯ ಅಂತ್ಯದಲ್ಲಿ ಸದಸ್ಯರು ತಮ್ಮ ಕುಟುಂಬದಲ್ಲಿ ಮಕ್ಕಳಿಗೆ ಸಮಾನ ಶಿಕ್ಷಣ ಮತ್ತು ಜವಾಬ್ದಾರಿಗಳನ್ನು ನೀಡುವುದಾಗಿ ನಿರ್ಧರಿಸಿದರು. ಶ್ರೀಮತಿ ಅನುಷಾಬಾಯಿ ವಂದನಾರ್ಪಣೆ ಮಾಡಿದರು.





## “ಸಣ್ಣ ಉದ್ಯಮಗಳ ಮೂಲಕ ಸ್ವಾವಲಂಬನೆಗೆ ಮಾರ್ಗದರ್ಶನ”



೦೯ ಏಪ್ರಿಲ್ ೨೦೨೫ರಂದು ಹುಮನಾಬಾದ್ ತಾಲೂಕಿನ ಹಳ್ಳಿಖೇಡ್ (ಬಿ) ಗ್ರಾಮದಲ್ಲಿ ಸಂಘದ ಸದಸ್ಯರಿಗಾಗಿ ಸ್ಥಳೀಯ ಸಂಪನ್ಮೂಲ ಕ್ರೋಡೀಕರಣ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ನೇತೃತ್ವವನ್ನು ಶ್ರೀಮತಿ ಅಮಿತಾ ವಹಿಸಿದ್ದು, ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರಾದ ಶ್ರೀಮತಿ ನಿರ್ಮಲ ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಸಣ್ಣ ಉದ್ಯಮಗಳನ್ನು ಆರಂಭಿಸಿ ಆರ್ಥಿಕವಾಗಿ ಸ್ವಾವಲಂಬಿಯಾಗುವ ಕುರಿತು ಮಾಹಿತಿ ನೀಡಲಾಯಿತು. ಹಾಲು ಉತ್ಪನ್ನಗಳು, ಹೋಳಿಗೆ, ಕಿರಾಣಿ ಅಂಗಡಿ ಹಾಗೂ ಬಟ್ಟೆ ವ್ಯಾಪಾರದಂತಹ ಉದ್ಯಮಗಳ ಬಗ್ಗೆ ಮಾರ್ಗದರ್ಶನ ನೀಡಲಾಯಿತು.

## “ಸಮಾನತೆಯಿಂದ ಸಮಾಜದ ಅಭಿವೃದ್ಧಿ”



೧೫ ಏಪ್ರಿಲ್ ೨೦೨೫ರಂದು ಭಾಲ್ಕಿ ತಾಲೂಕಿನ ಚಳಕಪುರ ಗ್ರಾಮದಲ್ಲಿ ಸಂಘದ ಸದಸ್ಯರು ಹಾಗೂ ಸಮುದಾಯದ ಜನರಿಗಾಗಿ ಲಿಂಗ ಮತ್ತು ಲಿಂಗತ್ವ ವ್ಯತ್ಯಾಸ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ನಿರ್ಮಲ ಮತ್ತು ಶ್ರೀ ಪ್ರಕಾಶ್ ರವರು ಲಿಂಗವು ಪ್ರಕೃತಿದತ್ತವಾದುದು ಹಾಗೂ ಲಿಂಗತ್ವವು ಸಮಾಜದಿಂದ ರೂಪುಗೊಂಡ ಪಾತ್ರಗಳಾಗಿವೆ ಎಂದು ತಿಳಿಸಿದರು. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ರಾಜಕೀಯ ಹಾಗೂ ಆಸ್ತಿ ಹಕ್ಕುಗಳಲ್ಲಿ ಸಮಾನ ಅವಕಾಶ ದೊರೆಯಬೇಕು ಎಂದು ಜಾಗೃತಿ ಮೂಡಿಸಲಾಯಿತು.

# “ಸಮಾನ ಅವಕಾಶ ಮತ್ತು ಆರೋಗ್ಯಕರ ಬದುಕಿನ ಸಂದೇಶ”





೧೩ ಏಪ್ರಿಲ್ ೨೦೨೬ರಂದು ಚಿಟ್ಟಗುಪ್ಪದ ಭಾಸ್ಕರ್ ನಗರದಲ್ಲಿ ಶ್ರೀಮತಿ ರೀಟಾ ಅವರ ನೇತೃತ್ವದಲ್ಲಿ ಕಮಲ ಮಹಾಸಂಘದ ಸದಸ್ಯರಿಗೆ ಲಿಂಗ ಸಮಾನತೆ ಮತ್ತು ಕ್ಯಾನ್ಸರ್ ಜಾಗೃತಿ ಕುರಿತು ತರಬೇತಿ ನೀಡಲಾಯಿತು. ಸಂಪನ್ಮೂಲ ವ್ಯಕ್ತಿಯಾದ ಯೋಹಾನ್ ವಾಲಿ ರವರು ಗಂಡು-ಹೆಣ್ಣು ಸಮಾನತೆ ಕುರಿತು ಮಾಹಿತಿ ನೀಡಿದರು. ಜೊತೆಗೆ ಸ್ತನ, ಬಾಯಿ, ಗಂಟಲು ಹಾಗೂ ಗರ್ಭಕೋಶದ ಕ್ಯಾನ್ಸರ್ ಲಕ್ಷಣಗಳ ಬಗ್ಗೆ ಜಾಗೃತಿ ಮೂಡಿಸಿ, ರೋಗದ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು ಎಂದು ಸಲಹೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು ೨೪ ಸದಸ್ಯರು ಭಾಗವಹಿಸಿದ್ದರು.

---

೦೮ ಏಪ್ರಿಲ್ ೨೦೨೬ರಂದು ಹುಮನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಬೆಳದಿಂಗಳು ಜಿಲ್ಲಾ ಒಕ್ಕೂಟದ ಸದಸ್ಯರಿಗಾಗಿ ಸಾಮರ್ಥ್ಯ ಬಲವರ್ಧನೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್ ರವರು ಮಾತನಾಡಿ, ಕಳೆದ ೩೦ ವರ್ಷಗಳಿಂದ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣಕ್ಕಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು. ಮಹಿಳೆಯರು ಸಿಸಿ ರಸ್ತೆ ನಿರ್ಮಾಣ, ಕುಡಿಯುವ ನೀರು, ವಿದ್ಯುತ್ ಸೌಲಭ್ಯಗಳು ಹಾಗೂ ಉದ್ಯೋಗ ಖಾತರಿ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ತಮ್ಮ ನಾಯಕತ್ವವನ್ನು ತೋರಿಸಿದ್ದಾರೆ ಎಂದು ಶ್ಲಾಘಿಸಿದರು. ಧಾರವಾಡದ ಸಾಧನ ಸಂಸ್ಥೆಯ ಸಂಸ್ಥಾಪಕರಾದ ಡಾ. ಇಸ್ ಬೆಲ್ಲ ಜೇವಿಯರ್ ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಮಹಿಳೆಯರು ದೌರ್ಜನ್ಯಗಳ ವಿರುದ್ಧ ಧೈರ್ಯವಾಗಿ ನಿಲ್ಲಬೇಕು ಹಾಗೂ ಆತ್ಮವಿಶ್ವಾಸದಿಂದ ಬದುಕಬೇಕು ಎಂದು ಪ್ರೇರೇಪಿಸಿದರು. ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಗುರುತಿಸಿಕೊಂಡು ಕುಟುಂಬ ಮತ್ತು ಸಮಾಜದಲ್ಲಿ ಘನತೆಯಿಂದ ಬದುಕಬೇಕು ಎಂದು ವಿವಿಧ ಉದಾಹರಣೆಗಳ ಮೂಲಕ ತಿಳಿಸಿದರು. ಈ ತರಬೇತಿಯಲ್ಲಿ ಒಟ್ಟು ೪೦ ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದರು.



## “ಸಬಲ ಮಹಿಳೆಯರ ನಿರ್ಮಾಣಕ್ಕೆ ಸಾಮರ್ಥ್ಯ ವಿಕಾಸ ತರಬೇತಿ”

---

# “ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಪುನರ್ವಸತಿ ಕಾರ್ಯಕ್ರಮ” ನವಜೀವನ -ಎಲ್.ಎಲ್.ಎಲ್.ಎಫ್




ಕಮಲ್‌ನಗರ ತಾಲೂಕಿನ ಲಕ್ಷ್ಮೀನಗರ ಗ್ರಾಮದಲ್ಲಿ ಗೀತಾ ಆರೈಕೆದಾರರ ಗುಂಪಿನ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಸಭೆಯಲ್ಲಿ ಒಟ್ಟು 8 ಜನ ಆರೈಕೆದಾರರು ಭಾಗವಹಿಸಿ, ಮಾನಸಿಕ ಅಸ್ವಸ್ಥರ ಆರೈಕೆಯಲ್ಲಿ ಕುಟುಂಬದ ಬೆಂಬಲ, ಔಷಧೋಪಚಾರದ ಮಹತ್ವ ಹಾಗೂ ಆರೈಕೆದಾರರ ಜವಾಬ್ದಾರಿಗಳ ಕುರಿತು ಮಾಹಿತಿ ಪಡೆದರು. ಆರೈಕೆದಾರರು ತಮ್ಮ ಅನುಭವಗಳನ್ನು ಹಂಚಿಕೊಂಡು, ಪರಸ್ಪರ ಸಹಕಾರದ ಅಗತ್ಯತೆ ಕುರಿತು ಚರ್ಚಿಸಿದರು. ಜೊತೆಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ಸಭೆಯ ಅಂತ್ಯದಲ್ಲಿ ಭಾಗವಹಿಸಿದವರು ತಮ್ಮ ಸಂಶಯಗಳಿಗೆ ಸ್ಪಷ್ಟನೆ ಪಡೆದುಕೊಂಡು, ಮಾನಸಿಕ ಅಸ್ವಸ್ಥರ ಆರೈಕೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುವ ಆತ್ಮವಿಶ್ವಾಸ ವ್ಯಕ್ತಪಡಿಸಿದರು.

**9036664271**

ಗೆ ಕರೆ ಮಾಡಿ – ಮಾನಸಿಕ ಅಸ್ವಸ್ಥರ ಸಹಾಯ ಹಾಗೂ ಮಾರ್ಗದರ್ಶನ ಪಡೆಯಿರಿ. ನಿಮ್ಮ ಮಾಹಿತಿ ಸಂಪೂರ್ಣ ಗೌಪ್ಯವಾಗಿರುತ್ತದೆ. ಸಂಕೋಚಪಡಬೇಡಿ, ಮಾನಸಿಕ ಸಮಸ್ಯೆಗಳು ಭಯಪಡುವಂತಹದ್ದು ಅಲ್ಲ. ಸರಿಯಾದ ಸಮಯದಲ್ಲಿ ಚಿಕಿತ್ಸೆ ಮತ್ತು ಬೆಂಬಲ ಪಡೆಯುವುದು ಅತ್ಯಂತ ಮುಖ್ಯ.

# ಮಾನಸಿಕ ಅಸ್ವಸ್ಥರ ಆರೋಗ್ಯ ಪರಿಶೀಲನೆಗಾಗಿ ಮನೆ ಭೇಟಿ

ದಿನಾಂಕ 11 ಏಪ್ರಿಲ್ 2026ರಂದು ಔರಾದ್ ತಾಲೂಕಿನ ಲಿಂಗಿ ಗ್ರಾಮದ ಫಲಾನುಭವಿಯಾದ ಬಳಿರಾಮ್ ತಂದೆ ಭೀಮರಾವ್ ಅವರ ಮನೆಗೆ ಭೇಟಿ ನೀಡಲಾಯಿತು. ಬಳಿರಾಮ್ ಅವರ ತಾಯಿ ಶ್ರೀಮತಿ ಸುಮನ್‌ಬಾಯಿ ಅವರು, ತಮ್ಮ ಮಗ ಮತ್ತು ಸೊಸೆ ಹಲವು ವರ್ಷಗಳಿಂದ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದರು ಎಂದು ತಿಳಿಸಿದರು. ಆ ಸಮಯದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಸಂಸ್ಥೆಯ ಕಾರ್ಯಕರ್ತರು ಚಿಕಿತ್ಸೆ ಮತ್ತು ಆರೈಕೆಯಲ್ಲಿ ವಿಶೇಷ ಸಹಕಾರ ನೀಡಿದ್ದು, ಪ್ರತಿ ತಿಂಗಳು ಔರಾದ್ ಸರ್ಕಾರಿ ಆಸ್ಪತ್ರೆಯಲ್ಲಿ ನಡೆಯುವ ಶಿಬಿರಕ್ಕೆ ಕರೆದುಕೊಂಡು ಹೋಗಿ ತಪಾಸಣೆ ಹಾಗೂ ಚಿಕಿತ್ಸೆ ಪಡೆಯಲು ನೆರವಾದರು ಎಂದು ಹೇಳಿದರು. ಸಮಯಕ್ಕೆ ಸರಿಯಾಗಿ ಔಷಧಿ ಸೇವಿಸುತ್ತಿರುವುದರಿಂದ ಇಬ್ಬರ ಆರೋಗ್ಯದಲ್ಲಿ ಉತ್ತಮ ಬದಲಾವಣೆ ಕಂಡುಬಂದಿದೆ ಎಂದು ಸಂತೋಷ ವ್ಯಕ್ತಪಡಿಸಿದರು. ತಮ್ಮ ಮಗ ಮತ್ತು ಸೊಸೆ ಗುಣಮುಖರಾಗಲು ಸಹಕಾರ ನೀಡಿದ ಆರ್ಬಿಟ್ ಸಂಸ್ಥೆಗೆ ಶ್ರೀಮತಿ ಸುಮನ್‌ಬಾಯಿ ಅವರು ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಿದರು.










## “ಮೂಢನಂಬಿಕೆ ವಿರುದ್ಧ ಮಾನಸಿಕ ಆರೋಗ್ಯ ಜಾಗೃತಿ”

ದಿನಾಂಕ 11 ಏಪ್ರಿಲ್ 2026ರಂದು ಭಾಲ್ಕಿ ತಾಲೂಕಿನ ಡಾವರಗೌನ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಆಶ್ರಯದಲ್ಲಿ ಹಾಗೂ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಕಾರ್ಯಕ್ರಮದಡಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಕಾರ್ಯಕರ್ತರಾದ ಶ್ರೀ ಪ್ರಕಾಶ್ ರವರು ಮಾನಸಿಕ ಆರೋಗ್ಯದ ಮಹತ್ವದ ಕುರಿತು ಮಾಹಿತಿ ನೀಡಿದರು. ಸಮಾಜದಲ್ಲಿ ಮಾನಸಿಕ ಅಸ್ವಸ್ಥತೆ ಕುರಿತು ಇರುವ ಮೂಢನಂಬಿಕೆಗಳು ಮತ್ತು ತಪ್ಪು ಕಲ್ಪನೆಗಳನ್ನು ದೂರ ಮಾಡುವ ಉದ್ದೇಶದಿಂದ ಜಾಗೃತಿ ಮೂಡಿಸಲಾಯಿತು. ಜೊತೆಗೆ ಮಾನಸಿಕ ಅಸ್ವಸ್ಥರಿಗೆ ಕುಟುಂಬದ ಬೆಂಬಲ, ಸಮಾಜದ ಸಹಕಾರ ಹಾಗೂ ಸಮಯಕ್ಕೆ ಸರಿಯಾದ ಚಿಕಿತ್ಸೆ ಅತ್ಯಂತ ಅಗತ್ಯವೆಂದು ತಿಳಿಸಲಾಯಿತು. ಮಾನಸಿಕ ಅಸ್ವಸ್ಥರನ್ನು ನಿರ್ಲಕ್ಷ್ಯ ಮಾಡದೆ ಪ್ರೀತಿ ಮತ್ತು ಸಹಾನುಭೂತಿಯಿಂದ ನೋಡಿಕೊಳ್ಳಬೇಕು ಎಂದು ಸಲಹೆ ನೀಡಲಾಯಿತು. ಪ್ರತಿ ತಿಂಗಳ ಎರಡನೇ ಮಂಗಳವಾರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆಯುವ ಡಿ.ಎಂ.ಹೆಚ್.ಪಿ ಶಿಬಿರದಲ್ಲಿ ಉಚಿತ ತಪಾಸಣೆ, ಔಷಧಿ ಹಾಗೂ ವೈದ್ಯರ ಸಲಹೆ ಪಡೆಯಬಹುದು ಎಂದು ಮಾಹಿತಿ ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 11 ಜನರು ಭಾಗವಹಿಸಿ ಮಾಹಿತಿ ಪಡೆದರು.



ದಿನಾಂಕ 13 ಏಪ್ರಿಲ್ 2026ರಂದು ಭಾಲ್ಕಿ ತಾಲೂಕು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಸೈಕೋ-ಸೋಶಿಯಲ್ ಎಜುಕೇಶನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಶ್ರೀಮತಿ ರೂಪಾಲಿ ಸಾಲಗರೆ ರವರು ಮಾನಸಿಕ ಆರೋಗ್ಯದ ಮಹತ್ವ, ಒತ್ತಡ ನಿರ್ವಹಣೆ ಹಾಗೂ ಚಿಕಿತ್ಸೆ 的 重 要 ತೆ ಕುರಿತು ಜಾಗೃತಿ ಮೂಡಿಸಿದರು. ಭಾಗವಹಿಸಿದವರು ಜೀವನ ಕೌಶಲ್ಯಗಳು ಮತ್ತು ಯೋಗ ಅಭ್ಯಾಸದ ಬಗ್ಗೆ ತಿಳುವಳಿಕೆ ಪಡೆದರು.

## “ಮಾನಸಿಕ ಆರೋಗ್ಯ ಮತ್ತು ಒತ್ತಡ ನಿರ್ವಹಣೆ ತರಬೇತಿ”

# ಆರೈಕೆದಾರರ ಸಹಕಾರ ಮತ್ತು ಮಾರ್ಗದರ್ಶನ ಸಭೆ

ದಿನಾಂಕ 13 ಏಪ್ರಿಲ್ 2026ರಂದು ಬೀದರ್ ತಾಲೂಕಿನ ಹಿಪ್ಪಳಗಾಂವ್ ಗ್ರಾಮದಲ್ಲಿ ಗಾಂಧೀಜಿ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ಭಾಗವಹಿಸಿದ ಎಲ್ಲ ಆರೈಕೆದಾರರ ಆರೋಗ್ಯ ಕ್ಷೇಮವನ್ನು ವಿಚಾರಿಸಲಾಯಿತು.

ಸಭೆಯ ಮುಖ್ಯ ಉದ್ದೇಶಗಳು ಎಂದರೆ ಪರಸ್ಪರ ಬೆಂಬಲ, ಅನುಭವ ಹಂಚಿಕೆ ಹಾಗೂ ಮಾನಸಿಕ ಅಸ್ವಸ್ಥರ ಆರೈಕೆಯ ಕುರಿತು ಅರಿವು ಮೂಡಿಸುವುದಾಗಿತ್ತು. ಸಮಯಕ್ಕೆ ಸರಿಯಾಗಿ ಔಷಧಿ ನೀಡುವುದು, ವೈದ್ಯರ ಸಲಹೆ ಪಾಲಿಸುವುದು ಮತ್ತು ಶಾಂತ ವಾತಾವರಣವನ್ನು ಒದಗಿಸುವ ಮಹತ್ವವನ್ನು ಚರ್ಚಿಸಲಾಯಿತು.

ಈ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಸೇರಿದಂತೆ ಒಟ್ಟು 6 ಜನರು ಭಾಗವಹಿಸಿದರು.



# ಫಲಾನುಭವಿಗಳ ಕಲ್ಯಾಣ ಮತ್ತು ಮಾರ್ಗದರ್ಶನ ಸಭೆ

ದಿನಾಂಕ 15 ಏಪ್ರಿಲ್ 2026ರಂದು ಬೀದರ್ ತಾಲೂಕಿನ ಚಿಲ್ಲರ್ಗಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದಡಿ ಪಾಲಕ-ಪೋಷಕರ ಸಭೆ ನಡೆಯಿತು. ಸಭೆಯಲ್ಲಿ ಫಲಾನುಭವಿಗಳ ಆರೋಗ್ಯ, ಔಷಧಿ ಬಳಕೆ, ದಿನನಿತ್ಯ ಆರೈಕೆ ಹಾಗೂ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. “ಆರೋಗ್ಯವೇ ಭಾಗ್ಯ” ಎಂಬ ಸಂದೇಶದೊಂದಿಗೆ ಆತ್ಮವಿಶ್ವಾಸ ಹೆಚ್ಚಿಸಲಾಯಿತು. ಈ ಸಭೆಯಲ್ಲಿ ಒಟ್ಟು 7 ಜನರು ಭಾಗವಹಿಸಿದ್ದರು.



# ಫಲಾನುಭವಿಗಳ ಕಲ್ಯಾಣ ಮತ್ತು ಮಾರ್ಗದರ್ಶನ ಸಭೆ

# ಯುಡಿಐಡಿ ಮತ್ತು ಆರೋಗ್ಯ ಸೇವೆಗಳ ಕುರಿತು ಮಾಹಿತಿ ಸಭೆ



ದಿನಾಂಕ 16 ಏಪ್ರಿಲ್ 2025ರಂದು ಬೀದರ್ ತಾಲೂಕಿನ ಹಮಿಲಾಪುರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದಡಿ ಪಾಲಕ-ಪೋಷಕರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ರವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು.

ಸಭೆಯಲ್ಲಿ ಫಲಾನುಭವಿಗಳ ಔಷಧಿ ಪರಿಶೀಲನೆ ಮಾಡಿ, ದಿನನಿತ್ಯ ಸಮಯಕ್ಕೆ ಸರಿಯಾಗಿ ಮಾತ್ರೆಗಳನ್ನು ತೆಗೆದುಕೊಳ್ಳುವ ಮಹತ್ವವನ್ನು ತಿಳಿಸಲಾಯಿತು. ಯುಡಿಐಡಿ ಕ್ಯಾಂಪ್, ವೈದ್ಯರ ಸಲಹೆ ಹಾಗೂ ಆಪ್ತ ಸಮಾಲೋಚನೆಯ ಅಗತ್ಯತೆಯ ಕುರಿತು ಮಾಹಿತಿ ನೀಡಲಾಯಿತು. ಮಾತ್ರೆಗಳಿಂದ ಯಾವುದೇ ಅಡ್ಡಪರಿಣಾಮ ಕಂಡುಬಂದಲ್ಲಿ ತಕ್ಷಣ ತಿಳಿಸಿ ಚಿಕಿತ್ಸೆ ಬದಲಾಯಿಸಿಕೊಳ್ಳಬೇಕು ಹಾಗೂ ಸರ್ಕಾರಿ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ಜಾಗೃತಿ ಮೂಡಿಸಲಾಯಿತು. ಈ ಸಭೆಯಲ್ಲಿ ಒಟ್ಟು 8 ಜನರು ಭಾಗವಹಿಸಿದ್ದರು.



# “ಲಿಂಗ ಸಮಾನತೆ ಮತ್ತು ಮಾನಸಿಕ ಆರೋಗ್ಯ ಶಿಕ್ಷಣ”

ದಿನಾಂಕ 16 ಏಪ್ರಿಲ್ 2026ರಂದು ಭಾಲ್ಕಿ ತಾಲೂಕಿನ ಚಾಳ್ಕಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥತೆ ಮತ್ತು ಲಿಂಗ ಸಮಾನತೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಕಾರ್ಯಕರ್ತರಾದ ಶ್ರೀ ಪ್ರಕಾಶ್ ರವರು ಮಾತನಾಡಿ, ಲಿಂಗ ಸಮಾನತೆ ಎಂದರೆ ಹೆಣ್ಣು-ಗಂಡು ಎಂಬ ತಾರತಮ್ಯವಿಲ್ಲದೆ ಸಮಾನ ಅವಕಾಶ ನೀಡುವುದು ಎಂದು ತಿಳಿಸಿದರು. ಜೊತೆಗೆ ಮಾನಸಿಕ ಅಸ್ವಸ್ಥತೆ ಒಂದು ಮೆದುಳಿನ ಕಾಯಿಲೆಯಾಗಿದ್ದು, ಸರಿಯಾದ ಚಿಕಿತ್ಸೆ ಮೂಲಕ ಗುಣಮುಖವಾಗಬಹುದು ಎಂದು ವಿವರಿಸಿದರು. ಮಾನಸಿಕ ಅಸ್ವಸ್ಥತೆ ಕುರಿತು ಇರುವ ಮೂಢನಂಬಿಕೆಗಳನ್ನು ದೂರ ಮಾಡಿ, ತಜ್ಞ ವೈದ್ಯರ ಚಿಕಿತ್ಸೆ ಪಡೆಯುವುದು ಅಗತ್ಯವೆಂದು ಜಾಗೃತಿ ಮೂಡಿಸಲಾಯಿತು. ಪ್ರತಿ ತಿಂಗಳ ಎರಡನೇ ಮಂಗಳವಾರ ಭಾಲ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ತಪಾಸಣೆ ಮತ್ತು ಚಿಕಿತ್ಸೆ ಲಭ್ಯವಿದೆ ಎಂದು ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 19 ಜನರು ಭಾಗವಹಿಸಿದರು.

# “ಚಿಕಿತ್ಸೆ ಮೂಲಕ ಗುಣಮುಖತೆ ಕುರಿತು ಮಾಹಿತಿ”



ದಿನಾಂಕ 16 ಏಪ್ರಿಲ್ 2026ರಂದು ಬೀದರ್ ತಾಲೂಕಿನ ನೆಮತಾಬಾದ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಮಾನಸಿಕ ಅಸ್ವಸ್ಥತೆ ಲಕ್ಷಣಗಳು, ಮೂಢನಂಬಿಕೆ ನಿವಾರಣೆ ಹಾಗೂ ಸರಿಯಾದ ವೈದ್ಯಕೀಯ ಚಿಕಿತ್ಸೆಯ ಮಹತ್ವವನ್ನು ವಿವರಿಸಲಾಯಿತು. ಪ್ರತಿ ತಿಂಗಳ 3ನೇ ಬುಧವಾರ ಚಿಲ್ಲರ್ಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಚಿಕಿತ್ಸೆ ಲಭ್ಯವಿದೆ ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 12 ಜನರು ಭಾಗವಹಿಸಿದರು.

## “ಸಮುದಾಯದಲ್ಲಿ ಮಾನಸಿಕ ಆರೋಗ್ಯ ಮತ್ತು ಲಿಂಗ ಸಮಾನತೆ ಕುರಿತು ಯಶಸ್ವಿ ಜಾಗೃತಿ ಕಾರ್ಯಕ್ರಮ”

ದಿನಾಂಕ 17 ಏಪ್ರಿಲ್ 2026ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ್ ಗ್ರಾಮದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಈ ಶಿಬಿರದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಫಲಾನುಭವಿಗಳಿಗೆ ಉಚಿತ ತಪಾಸಣೆ, ಅಗತ್ಯ ಮಾರ್ಗದರ್ಶನ ಹಾಗೂ ಔಷಧಿ ವಿತರಣೆ ಮೂಲಕ ಸಹಾಯ ಮಾಡಿದರು. ಈ ಶಿಬಿರದಲ್ಲಿ ಒಟ್ಟು 15 ಫಲಾನುಭವಿಗಳು ಭಾಗವಹಿಸಿದರು.



**“ಶಿಬಿರದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಫಲಾನುಭವಿಗಳಿಗೆ ಉಚಿತ ತಪಾಸಣೆ, ಅಗತ್ಯ ಮಾರ್ಗದರ್ಶನ ಹಾಗೂ ಔಷಧಿ ವಿತರಣೆ ಮೂಲಕ ಸಹಾಯ ಮಾಡಿದರು”**

ದಿನಾಂಕ 18 ಏಪ್ರಿಲ್ 2026ರಂದು ಔರಾದ್ ತಾಲೂಕಿನ ಲಿಂಗಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದಡಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆ ನಡೆಯಿತು. ಸಭೆಯ ಆರಂಭದಲ್ಲಿ ಶ್ರೀ ಸುನಿಲ್ ರವರು ಸಂವಿಧಾನ ಪೀಠಿಕೆ ವಾಚಿಸಿ ಜಾಗೃತಿ ಸಂದೇಶ ನೀಡಿದರು. ಸಭೆಯಲ್ಲಿ ಮಾನಸಿಕ ಆರೋಗ್ಯ, ಆರೈಕೆದಾರರ ಪಾತ್ರ ಹಾಗೂ ಸಮಾನತೆ ಕುರಿತು ಚರ್ಚೆ ನಡೆಯಿತು. ಮಾನಸಿಕ ಅಸ್ವಸ್ಥರಿಗೂ ಸಮಾನ ಗೌರವ ಮತ್ತು ಹಕ್ಕುಗಳಿವೆ ಎಂಬ ಅರಿವು ಮೂಡಿಸಲಾಯಿತು.



**“ಸಂವಿಧಾನ ಮೌಲ್ಯಗಳೊಂದಿಗೆ ಆರೈಕೆದಾರರ ಸಭೆ”**



## “ಮಾನಸಿಕ ಆರೋಗ್ಯ ಮತ್ತು ಕುಟುಂಬ ಬೆಂಬಲಕ್ಕೆ ಒತ್ತುನೀಡಿದ ಸಭೆ”





ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಕಾರ್ಯಕ್ರಮದಡಿ ಆರೈಕೆದಾರರು ಮತ್ತು ಪಾಲಕ-ಪೋಷಕರ ಜಾಗೃತಿ ಸಭೆ ನಡೆಸಲಾಯಿತು. ಆರೋಗ್ಯ, ಔಷಧಿ ಪಾಲನೆ ಹಾಗೂ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿ ಆತ್ಮವಿಶ್ವಾಸ ಹೆಚ್ಚಿಸಲಾಯಿತು. ಈ ಸಭೆಯಲ್ಲಿ ಒಟ್ಟು 9 ಜನರು ಭಾಗವಹಿಸಿದರು.

## “ಜನವಾಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಸಾಮಾಜಿಕ ಶಿಕ್ಷಣ ತರಬೇತಿ”



06 ಏಪ್ರಿಲ್ 2026ರಂದು ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಬೀದರ್ ಜಿಲ್ಲೆಯ ಜನವಾಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಸಾಮಾಜಿಕ ಶಿಕ್ಷಣ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಶ್ರೀಮತಿ ರೂಪಾಲಿ ಸಲ್ಗರೆ ಅವರು ಯಶಸ್ವಿಯಾಗಿ ನಡೆಸಿದರು. ಕಾರ್ಯಕ್ರಮದಲ್ಲಿ ಯೋಗ ಪ್ರದರ್ಶನದೊಂದಿಗೆ ಮಾನಸಿಕ ಆರೋಗ್ಯದ ಮಹತ್ವ, ಖಿನ್ನತೆ, ಆತಂಕ ಮತ್ತು ಒತ್ತಡದಂತಹ ಮಾನಸಿಕ ಸಮಸ್ಯೆಗಳ ಲಕ್ಷಣಗಳು ಹಾಗೂ ಕಾರಣಗಳ ಕುರಿತು ಮಾಹಿತಿ ನೀಡಲಾಯಿತು. ಧ್ಯಾನ, ಉಸಿರಾಟ ವ್ಯಾಯಾಮ, ಯೋಗ ಮತ್ತು ಸಕಾರಾತ್ಮಕ ಚಿಂತನೆಯ ಮೂಲಕ ಒತ್ತಡ ನಿರ್ವಹಣೆಯ ವಿಧಾನಗಳನ್ನು ವಿವರಿಸಲಾಯಿತು. ಮಾನಸಿಕ ಅಸ್ವಸ್ಥತೆಗಳಿಗೆ ವೈದ್ಯಕೀಯ ಚಿಕಿತ್ಸೆ ಮತ್ತು ಸಮಾಲೋಚನೆಯ ಅಗತ್ಯತೆ, ಕುಟುಂಬ ಹಾಗೂ ಸಾಮಾಜಿಕ ಬೆಂಬಲದ ಪಾತ್ರ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸುವ ಮಾರ್ಗಗಳ ಕುರಿತು ಜಾಗೃತಿ ಮೂಡಿಸಲಾಯಿತು.

## “ಕುಟುಂಬ ಆರೈಕೆದಾರರ ಜಾಗೃತಿ ಮತ್ತು ಮಾರ್ಗದರ್ಶನ ಸಭೆ”



ದಿನಾಂಕ 04 ಏಪ್ರಿಲ್ 2026ರಂದು ಬೀದರ್ ತಾಲೂಕಿನ ಜನವಾಡ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ಭಾಗವಹಿಸಿದ ಆರೈಕೆದಾರರ ಆರೋಗ್ಯ ಕ್ಷೇಮವನ್ನು ವಿಚಾರಿಸಲಾಯಿತು. ಸಭೆಯ ಮುಖ್ಯ ಉದ್ದೇಶವಾಗಿ ಪರಸ್ಪರ ಬೆಂಬಲ, ಅನುಭವ ಹಂಚಿಕೆ ಹಾಗೂ ಮಾನಸಿಕ ಅಸ್ವಸ್ಥರ ಆರೈಕೆಯ ಮಹತ್ವದ ಕುರಿತು ಚರ್ಚೆ ನಡೆಯಿತು. ಸಮಯಕ್ಕೆ ಸರಿಯಾಗಿ ಔಷಧಿ ನೀಡುವುದು, ವೈದ್ಯರ ಸಲಹೆ ಪಾಲಿಸುವುದು ಮತ್ತು ಶಾಂತ ಪರಿಸರ ಒದಗಿಸುವ ಅಗತ್ಯತೆ ತಿಳಿಸಲಾಯಿತು. ಈ ಸಭೆಯಲ್ಲಿ ಒಟ್ಟು 06 ಜನರು ಭಾಗವಹಿಸಿದರು.





## “ಆರೈಕೆದಾರರಿಗೆ ಔಷಧಿ ಪಾಲನೆ ಕುರಿತು ಮಾರ್ಗದರ್ಶನ”

ದಿನಾಂಕ 13 ಏಪ್ರಿಲ್ 2026ರಂದು ಬೀದರ್ ತಾಲೂಕಿನ ಯರನಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್‌ಲವ್‌ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಯಲ್ಲಿ ಭಾಗವಹಿಸಿದವರ ಆರೋಗ್ಯ ಕ್ಷೇಮವನ್ನು ವಿಚಾರಿಸಲಾಯಿತು. ಸಭೆಯ ಮುಖ್ಯ ಉದ್ದೇಶವಾಗಿ ಒಗ್ಗಟ್ಟು, ಪರಸ್ಪರ ಬೆಂಬಲ, ಅನುಭವ ಹಂಚಿಕೆ ಹಾಗೂ ಮಾನಸಿಕ ಅಸ್ವಸ್ಥರ ಆರೈಕೆಯ ಕುರಿತು ಚರ್ಚೆ ನಡೆಯಿತು. ಸಮಯಕ್ಕೆ ಸರಿಯಾಗಿ ಔಷಧಿ ನೀಡುವುದು, ವೈದ್ಯರ ಸಲಹೆ ಪಾಲಿಸುವುದು, ದೈನಂದಿನ ಆರೈಕೆ, ಶಾಂತ ಮತ್ತು ಸುರಕ್ಷಿತ ವಾತಾವರಣ ಒದಗಿಸುವುದು ಹಾಗೂ ಪ್ರತಿ ತಿಂಗಳ ಶಿಬಿರಕ್ಕೆ ಫಲಾನುಭವಿಗಳನ್ನು ಕರೆತರುವ ಅಗತ್ಯತೆ ತಿಳಿಸಲಾಯಿತು. ಅದೇ ರೀತಿ ತಮ್ಮ ಹಕ್ಕುಗಳ ಕುರಿತು ಜಾಗೃತಿ ಹೊಂದಿ ಅಗತ್ಯ ಸೇವೆಗಳಿಗಾಗಿ ವಕಾಲತ್ತು ಮಾಡುವ ಮಹತ್ವವನ್ನು ತಿಳಿಸಲಾಯಿತು. ಈ ಸಭೆಯಲ್ಲಿ ಒಟ್ಟು 06 ಜನರು ಭಾಗವಹಿಸಿದರು.



# "ಮಾನಸಿಕ ಅಸ್ವಸ್ಥ ಫಲಾನುಭವಿಗಳಿಗೆ ಜೀವನೋಪಾಯಕ್ಕಾಗಿ ಕುರಿ ವಿತರಣೆ"

ದಿನಾಂಕ 04 ಏಪ್ರಿಲ್ 2026ರಂದು ಭಾಲ್ಕಿ ತಾಲೂಕಿನ ಬಾಲಯೇಸು ಆಶ್ರಮದಲ್ಲಿ ಆರ್ಬಿಟ್ ಸಂಸ್ಥೆ ವತಿಯಿಂದ ಮಾನಸಿಕ ಅಸ್ವಸ್ಥರಿಗೆ ಕುರಿಗಳ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಹಿಂದೆ ಫಲಾನುಭವಿಗಳನ್ನು ನಿಯಮಿತವಾಗಿ ಮಾನಸಿಕ ಆರೋಗ್ಯ ತಪಾಸಣಾ ಶಿಬಿರಗಳಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಮೂಲಕ ಗುಣಮುಖರಾಗಿರುವ ಫಲಾನುಭವಿಗಳಿಗೆ ಸ್ವಾವಲಂಬಿ ಜೀವನೋಪಾಯ ಕಲ್ಪಿಸುವ ಉದ್ದೇಶದಿಂದ ಕುರಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ವಂದನೀಯ ಫಾದರ್ ಡೇವಿಡ್, ಫಾದರ್ ಆನ್ಸಿ, ಜಿಲ್ಲಾ ಸಂಯೋಜಕ ರಫೀಕ್, ಯೋಜನಾ ವ್ಯವಸ್ಥಾಪಕರು ಸಿಸ್ಟರ್ ಕ್ರಿಸ್ಟಿನ್ ಹಾಗೂ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು. ಒಟ್ಟು 07 ಫಲಾನುಭವಿಗಳು ಭಾಗವಹಿಸಿದರು.

---



# "ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯಲ್ಲಿ ಸಂವಿಧಾನ ಪೀಠಿಕೆ ವಾಚನೆ"

ದಿನಾಂಕ 16 ಏಪ್ರಿಲ್ 2026ರಂದು ಔರಾದ್ ತಾಲೂಕಿನ ಖೇರ್ಡಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದಡಿ ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಸಭೆಯ ಆರಂಭದಲ್ಲಿ ಶ್ರೀ ಸುನಿಲ್ ರವರು ಭಾರತ ಸಂವಿಧಾನ ಪೀಠಿಕೆಯನ್ನು ವಾಚಿಸಿ ಜಾಗೃತಿ ಮತ್ತು ಗೌರವದ ಸಂದೇಶ ನೀಡಿದರು. ಸಭೆಯಲ್ಲಿ ಸಂವಿಧಾನದ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವ ಮತ್ತು ಮಾನವ ಗೌರವದ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ಅಸ್ವಸ್ಥರೂ ಸಮಾನ ಹಕ್ಕುಗಳಿರುವ ನಾಗರಿಕರು ಎಂಬ ಸಂದೇಶವನ್ನು ಒತ್ತಿಹೇಳಲಾಯಿತು. ಕಾರ್ಯಕ್ರಮದಲ್ಲಿ ಮಾನಸಿಕ ಆರೋಗ್ಯದ ಮಹತ್ವ, ಆರೈಕೆದಾರರ ಪಾತ್ರ ಹಾಗೂ ಕುಟುಂಬದ ಬೆಂಬಲ ಕುರಿತು ಚರ್ಚೆ ನಡೆಯಿತು. ಆರೈಕೆದಾರರು ತಮ್ಮ ಅನುಭವಗಳನ್ನು ಹಂಚಿಕೊಂಡು ಪರಸ್ಪರ ಬೆಂಬಲದ ಅಗತ್ಯತೆಯನ್ನು ತಿಳಿಸಿದರು.

---

17 ಏಪ್ರಿಲ್ 2026ರಂದು ಭಾಲ್ಕಿ ತಾಲೂಕಿನ ಗೋಧಿಹಿಪ್ಪರಗಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು. ಮಾನಸಿಕ ಆರೋಗ್ಯ ಮತ್ತು ಚಿಕಿತ್ಸೆ ಕುರಿತು ಮಾಹಿತಿ ನೀಡಲಾಯಿತು. ಉಚಿತ ತಪಾಸಣೆ ಸೇವೆಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 09 ಜನರು ಭಾಗವಹಿಸಿದರು.



ಮೇ
2026

ಸೇವಾ ಸಂಗಮ ಸಂಸ್ಥೆ, ಕಲಬುರಗಿ

# ಸೇವಾವಾಣಿ

"ಸೇವೆಯ ಸಂದೇಶ, ಸಮಾಜದ ಸ್ಪಂದನ"

## ಮಾಸಿಕ ಸುದ್ದಿಪತ್ರಿಕೆ

"ಪ್ರೀತಿಯಿಂದ ಮಾಡಿದ ಸಣ್ಣ ಕಾರ್ಯಗಳೇ ದೊಡ್ಡ ಬದಲಾವಣೆಗೆ ಕಾರಣ."

### ಸಂಪಾದಕೀಯ

ಈ ತಿಂಗಳಲ್ಲಿ ನಮ್ಮ ಸಂಸ್ಥೆಯ ಪ್ರಮುಖ ಚಟುವಟಿಕೆಗಳು ಮತ್ತು ಸಮುದಾಯದಲ್ಲಿ ಮೂಡಿದ ಬದಲಾವಣೆಗಳ ಸಂಕ್ಷಿಪ್ತ ಪರಿಚಯ.

## ಮಕ್ಕಳಲ್ಲಿ ಅಪೌಷ್ಠಿಕತೆಯನ್ನು ತಡೆಗಟ್ಟುವಲ್ಲಿ

# “ಮಕ್ಕಳ ಮನೆ” ಕಾರ್ಯಕ್ರಮ

ದಿನಾಂಕ 17 ಏಪ್ರಿಲ್ 2026ರಂದು, ಸೇವಾ ಸಂಗಮ ಸಂಸ್ಥೆಯ ಪ್ರಾದೇಶಿಕ ಕಚೇರಿ, ಯಡ್ರಾಮಿಯಲ್ಲಿ ಕ್ರೆಚ್ ಮಕ್ಕಳ ಮನೆ ಕಾರ್ಯಕ್ರಮದಡಿ ಆರೈಕೆದಾರರ ಮಾಸಿಕ ಸಭೆ ಯಶಸ್ವಿಯಾಗಿ ನಡೆಯಿತು. ಈ ಸಭೆಯಲ್ಲಿ ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನ ಶರಣ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾರ್ಗದರ್ಶನ ನೀಡಿದರು. ಸಂಯೋಜಕರಾದ ಚಂದ್ರಕಾಂತ್ ಹಾಗೂ ಮೇಲ್ವಿಚಾರಕರಾದ ಶಕುಂತಲಾ ಅವರು ಕಿರು ನಾಟಕದ ಮೂಲಕ ಆರೈಕೆದಾರರ ಜವಾಬ್ದಾರಿಗಳು, ಮಕ್ಕಳ ಹಾಜರಾತಿ, ಬೇಸಿಗೆಯಲ್ಲಿ ಕೇಂದ್ರಗಳ ಸಮರ್ಪಕ ನಿರ್ವಹಣೆ ಹಾಗೂ ಅಪೌಷ್ಟಿಕ ಮಕ್ಕಳ ಆರೈಕೆ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಅರುಣ್ ಕುಮಾರ್ ಹಾಗೂ ಲಾಜಿಸ್ಟಿಕ್ ಸಂಯೋಜಕರಾದ ದೇವೇಂದ್ರ ಅವರು ಆರೈಕೆದಾರರಿಂದ ಪ್ರತಿಕ್ರಿಯೆ ಪಡೆದುಕೊಂಡರು. ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ಆರೈಕೆದಾರರೊಂದಿಗೆ ಸಂವಾದ ನಡೆಸಿ, ಅವರ ಸವಾಲುಗಳು ಮತ್ತು ಅಗತ್ಯಗಳ ಕುರಿತು ಚರ್ಚಿಸಿದರು. ಈ ಸಭೆಯಲ್ಲಿ ಒಟ್ಟು 14 ಆರೈಕೆದಾರರು ಭಾಗವಹಿಸಿದ್ದರು.





# “ಕೇಂದ್ರ ತಂಡದಿಂದ ಕ್ರೆಚ್ ಕೇಂದ್ರಗಳ ಭೇಟಿ ಹಾಗೂ ಕಾರ್ಯಪರಿಶೀಲನೆ”



ದಿನಾಂಕ 20 ಏಪ್ರಿಲ್ 2026ರಂದು, ಕೇಂದ್ರ ತಂಡದ ಅಭಿಷೇಕ್ ಮತ್ತು ಶ್ರೇಷ್ಠ ಅವರು ಯಡ್ರಾಮಿ ತಾಲೂಕಿನ ಕ್ರೆಚ್ ಕೇಂದ್ರಗಳಿಗೆ ಕ್ಷೇತ್ರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇಜೇರಿ ಮತ್ತು ಸಾತ್‌ಹಳ್ಳಿ ಕೇಂದ್ರಗಳಿಗೆ ಭೇಟಿ ನೀಡಿ, ಬಳಿಕ ಸೇವಾ ಸಂಗಮ ಸಂಸ್ಥೆಯಲ್ಲಿ ಮೌಲ್ಯಮಾಪನ ಸಭೆ ನಡೆಸಿ ಕಾರ್ಯಕ್ರಮದ ಪ್ರಗತಿಯ ಕುರಿತು ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ವ್ಯವಸ್ಥಾಪಕರಾದ ಅರುಣ್ ಕುಮಾರ್ ಅವರು ಪಿಪಿಟಿ ಮೂಲಕ ವರದಿ ಮಂಡಿಸಿದರು. ಸಭೆಯಲ್ಲಿ ಫಾದರ್ ವಿಕ್ಟರ್ ವಾಸ್, ಗುರುರಾಜ್ ಶರಣ್ ಹಾಗೂ ಕ್ರೆಚ್ ಯೋಜನೆಯ ಕಾರ್ಯಕರ್ತರು ಭಾಗವಹಿಸಿದ್ದರು. ಕ್ಷೇತ್ರ ಭೇಟಿಯ ಬಳಿಕ ತಂಡವು ಕಾರ್ಯಕ್ರಮದ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ, ಮುಂದಿನ ದಿನಗಳಿಗಾಗಿ ಅಮೂಲ್ಯ ಸಲಹೆಗಳನ್ನು ನೀಡಿತು. ಜೊತೆಗೆ ಫಲಾನುಭವಿ ಮಕ್ಕಳ ಪೋಷಕರು ಮತ್ತು ಆರೈಕೆದಾರರೊಂದಿಗೆ ಸಂವಾದ ನಡೆಸಿ ಅವರ ಅಭಿಪ್ರಾಯಗಳನ್ನು ಆಲಿಸಲಾಯಿತು.

ದಿನಾಂಕ 6 ಏಪ್ರಿಲ್ 2026ರಂದು, ಆಲೂರ್ ಗ್ರಾಮದ ಕ್ರೆಚ್ ಕೇಂದ್ರದಲ್ಲಿ ತಾಯಂದಿರ ಸಭೆಯನ್ನು ಆಯೋಜಿಸಲಾಯಿತು. ಈ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೇಂದ್ರದ ಮೇಲ್ವಿಚಾರಕರಾದ ನಾಗರಾಜ್ ಅವರು ಭಾಗವಹಿಸಿ ಯೋಜನೆಯ ಕುರಿತು ಮಾಹಿತಿ ನೀಡಿದರು. ಮಕ್ಕಳನ್ನು ನಿರಂತರವಾಗಿ ಕೇಂದ್ರಕ್ಕೆ ಕಳುಹಿಸಿ, ದಿನಕ್ಕೆ ಮೂರು ಹೊತ್ತಿನ ಪೌಷ್ಠಿಕ ಆಹಾರ ಸೇವಿಸುವುದರಿಂದ ಅವರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಉತ್ತಮವಾಗುವುದರ ಜೊತೆಗೆ ಅಪೌಷ್ಟಿಕತೆಯಿಂದ ಹೊರಬರಲು ಸಹಾಯಕವಾಗುತ್ತದೆ ಎಂದು ತಿಳಿಸಿದರು. ಸಭೆಯಲ್ಲಿ ತಾಯಂದಿರು ಸಕ್ರಿಯವಾಗಿ ಭಾಗವಹಿಸಿ, ಯೋಜನೆ ಕುರಿತು ಅರಿವು ಪಡೆದು ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡರು. ಈ ಸಭೆಯಲ್ಲಿ ಒಟ್ಟು 15 ಮಕ್ಕಳ ತಾಯಂದಿರು ಭಾಗವಹಿಸಿದ್ದರು.



“ಕೇಂದ್ರ ತಂಡದಿಂದ ಕ್ರೆಚ್ ಕೇಂದ್ರಗಳ ಭೇಟಿ ಹಾಗೂ ಕಾರ್ಯಪರಿಶೀಲನೆ”





## “ಕೇಂದ್ರ ತಂಡದಿಂದ ಕ್ರೆಚ್ ಕೇಂದ್ರಗಳ ಭೇಟಿ ಹಾಗೂ ಕಾರ್ಯಪರಿಶೀಲನೆ”

ದಿನಾಂಕ 6 ಏಪ್ರಿಲ್ 2026ರಂದು, ಆಲೂರ್ ಗ್ರಾಮದ ಕ್ರೆಚ್ ಕೇಂದ್ರದಲ್ಲಿ ತಾಯಂದಿರ ಸಭೆಯನ್ನು ಆಯೋಜಿಸಲಾಯಿತು. ಈ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೇಂದ್ರದ ಮೇಲ್ವಿಚಾರಕರಾದ ನಾಗರಾಜ್ ಅವರು ಭಾಗವಹಿಸಿ ಯೋಜನೆಯ ಕುರಿತು ಮಾಹಿತಿ ನೀಡಿದರು. ಮಕ್ಕಳನ್ನು ನಿರಂತರವಾಗಿ ಕೇಂದ್ರಕ್ಕೆ ಕಳುಹಿಸಿ, ದಿನಕ್ಕೆ ಮೂರು ಹೊತ್ತಿನ ಪೌಷ್ಟಿಕ ಆಹಾರ ಸೇವಿಸುವುದರಿಂದ ಅವರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಉತ್ತಮವಾಗುವುದರ ಜೊತೆಗೆ ಅಪೌಷ್ಟಿಕತೆಯಿಂದ ಹೊರಬರಲು ಸಹಾಯಕವಾಗುತ್ತದೆ ಎಂದು ತಿಳಿಸಿದರು. ಸಭೆಯಲ್ಲಿ ತಾಯಂದಿರು ಸಕ್ರಿಯವಾಗಿ ಭಾಗವಹಿಸಿ, ಯೋಜನೆ ಕುರಿತು ಅರಿವು ಪಡೆದು ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡರು. ಈ ಸಭೆಯಲ್ಲಿ ಒಟ್ಟು 15 ಮಕ್ಕಳ ತಾಯಂದಿರು ಭಾಗವಹಿಸಿದ್ದರು.



## “ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”





## ಚೇತನ ಕೇಂದ್ರದಲ್ಲಿ ಸಿಬ್ಬಂದಿ ವರ್ಗದವರಿಗೆ 5 ದಿನಗಳ ತರಬೇತಿ

ದಿನಾಂಕ 6 ಏಪ್ರಿಲ್ 2026ರಂದು, ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದಲ್ಲಿ ಸಿಬ್ಬಂದಿ ವರ್ಗದವರಿಗೆ 5 ದಿನಗಳ ತರಬೇತಿ ಕಾರ್ಯಕ್ರಮವನ್ನು ಕಲಬುರಗಿ ನಗರದ ಚೇತನ ಕೇಂದ್ರದಲ್ಲಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ ಸಾಕ್ಯ ಸಂಸ್ಥೆ ವತಿಯಿಂದ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಶ್ರೀಯುತ ಖಾಜಾ ಹುಸೈನ್ ಅವರು ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳನ್ನು ಗುರುತಿಸುವ ವಿಧಾನಗಳು ಹಾಗೂ ಅವರಿಗೆ ನೀಡಬೇಕಾದ ವಿವಿಧ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಮಕ್ಕಳ ದೈಹಿಕ ಚಲನ-ವಲನಗಳ ಮೂಲಕ ಏಕಾಗ್ರತೆ ಹೆಚ್ಚಿಸುವ ತರಬೇತಿ, ವಾಕ್‌ಚಟುವಟಿಕೆಗಳ ಮೂಲಕ ಮಾತಿನ ಬೆಳವಣಿಗೆಗೆ ಅಗತ್ಯವಾದ ತಂತ್ರಗಳು ಹಾಗೂ ಬರವಣಿಗೆ ತರಬೇತಿಯನ್ನು ಯಾವ ವಯಸ್ಸಿನಲ್ಲಿ ಪ್ರಾರಂಭಿಸಬೇಕು ಎಂಬುದರ ಕುರಿತು ಪ್ರಾಯೋಗಿಕವಾಗಿ ವಿವರಿಸಿದರು. ಜೊತೆಗೆ ಸಿಬ್ಬಂದಿ ವರ್ಗದವರು ಪಡೆದ ತರಬೇತಿಯನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವ ಕುರಿತು ಮಾರ್ಗದರ್ಶನ ನೀಡಲಾಯಿತು. ಈ ತರಬೇತಿಯಲ್ಲಿ ವ್ಯವಸ್ಥಾಪಕರೊಂದಿಗೆ ಒಟ್ಟು 9 ಸಿಬ್ಬಂದಿ ವರ್ಗದವರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.



# ವಿಶೇಷ ಮಕ್ಕಳ ಗುರುತಿಸುವಿಕೆ ಕುರಿತು ಅಂಗನವಾಡಿ ಕಾರ್ಯಕರ್ತರಿಗೆ ಮಾರ್ಗದರ್ಶನ

ದಿನಾಂಕ 7 ಏಪ್ರಿಲ್ 2026ರಂದು, ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತರಿಗಾಗಿ ಒಂದು ದಿನದ ತರಬೇತಿ ಕಾರ್ಯಗಾರವನ್ನು ಸೆಂಟ್ ಮೇರಿ ಶಾಲೆ ಸಭಾಂಗಣದಲ್ಲಿ ಆಯೋಜಿಸಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸಾಖ್ಯ ಫೌಂಡೇಶನ್, ಬೆಂಗಳೂರು ವತಿಯಿಂದ ಆಗಮಿಸಿದ್ದ ಫಿಜಿಯೋಥೆರಪಿಸ್ಟ್ ಶ್ರೀ ಖಾಜಾ ಹುಸೈನ್ ಅವರು 0–8 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು, ಅದರ ಕಾರಣಗಳು ಹಾಗೂ ವಿವಿಧ ದೈಹಿಕ ನ್ಯೂನತೆಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ವಿಶೇಷವಾಗಿ 2016ರ ಕಾಯ್ದೆಯ ಪ್ರಕಾರ 21 ವಿಧದ ಅಂಗವೈಕಲ್ಯಗಳ ಕುರಿತು ವಿವರಿಸಿದರು. ಕಲಬುರಗಿ ನಗರ ಪ್ರದೇಶ ಹಾಗೂ 3 PHC ವ್ಯಾಪ್ತಿಯಲ್ಲಿರುವ ಇಂತಹ ಮಕ್ಕಳ ಕುರಿತು ಸೇವಾ ಸಂಗಮ ಸಂಸ್ಥೆಗೆ ಮಾಹಿತಿ ನೀಡುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಸೀನಿಯರ್ ಸೂಪರ್ವೈಸರ್ ಸಂಗೀತಾ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಇಂತಹ ಮಕ್ಕಳ ಸೇವೆಯಲ್ಲಿ ಸಂಸ್ಥೆಯ ಪಾತ್ರ ಶ್ಲಾಘನೀಯವೆಂದು ತಿಳಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಯೋಜನಾ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಅವರು ಸಂಸ್ಥೆಯ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು. ಈ ತರಬೇತಿಯಲ್ಲಿ ಖಾನಾಪುರ ವಲಯದ 60 ಅಂಗನವಾಡಿ ಕಾರ್ಯಕರ್ತರು ಹಾಗೂ ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿ ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

---



ದಿನಾಂಕ 1 ಏಪ್ರಿಲ್ 2026ರಂದು, ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದಲ್ಲಿ ಕಲಬುರಗಿ ತಾಲೂಕಿನ ಸಾವಳಗಿ ಗ್ರಾಮದಲ್ಲಿ, ಶ್ರೀ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಟೆಂಟ್ ಅವೇರ್ನೆಸ್ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ 0 ರಿಂದ 8 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳನ್ನು ಶೀಘ್ರವಾಗಿ ಗುರುತಿಸುವುದು, ಉತ್ತೇಜಕ ಚಟುವಟಿಕೆಗಳ ಮಹತ್ವ ಹಾಗೂ UDID ಕಾರ್ಡ್, ಆರೈಕೆದಾರ ಪಿಂಚಣಿ ಮತ್ತು ನಿರಾಮಯ ಯೋಜನೆಗಳ ಕುರಿತು ಮಾಹಿತಿ ನೀಡಲಾಯಿತು. ಲಕ್ಷ್ಮಿ ಅವರು ಸುಮಾರು 100 ಗ್ರಾಮಸ್ಥರಿಗೆ ಜಾಗೃತಿ ಮೂಡಿಸಿದರು.

---



ದಿನಾಂಕ 1 ಏಪ್ರಿಲ್ 2026ರಂದು, ಕಲಬುರಗಿ ನಗರದ ರಂಗಿನ್ ಮಸೀದ್ ಏರಿಯಾ ಅಂಗನವಾಡಿ ಕೇಂದ್ರ–01ರಲ್ಲಿ, ಸೇವಾ ಸಂಗಮ ಸಂಸ್ಥೆ, ಅಜೀಮ್ ಪ್ರೇಮ್‌ಜಿ ಫೌಂಡೇಶನ್, ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಕು. ಅನಿತಾ ಅವರು ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳ ಗುರುತು, ಅವರ ನ್ಯೂನತೆಗಳ ಕಾರಣಗಳು ಹಾಗೂ ಸೇವಾ ಸಂಗಮ ಸಂಸ್ಥೆ ಮತ್ತು ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಜೊತೆಗೆ ಪೌಷ್ಠಿಕ ಆಹಾರದ ಮಹತ್ವದ ಕುರಿತು ಮಹಿಳೆಯರಿಗೆ ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 15 ಜನರು ಭಾಗವಹಿಸಿದ್ದರು.




ದಿನಾಂಕ 10 ಏಪ್ರಿಲ್ 2026ರಂದು, ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದಲ್ಲಿ ಕಲಬುರಗಿ ನಗರದ ಚೇತನ ಕೇಂದ್ರದಲ್ಲಿ ಪಾಲಕರ ತರಬೇತಿ ಕಾರ್ಯಗಾರ ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪಾಲಕರಿಗೆ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳ ಆರೈಕೆ, ಅವರ ಸರ್ವತೋಮುಖ ಅಭಿವೃದ್ಧಿ ಹಾಗೂ ಮನೆಯಲ್ಲಿ ನಡೆಸಬಹುದಾದ ಉತ್ತೇಜಕ ಚಟುವಟಿಕೆಗಳ ಕುರಿತು ಮಾರ್ಗದರ್ಶನ ನೀಡಲಾಯಿತು. ಫಾದರ್ ವಿಕ್ಟರ್ ವಾಸ್, ಶ್ರೀಮತಿ ಶ್ವೇತಾ ಹಾಗೂ ಖಾಜಾ ಹುಸೈನ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಅಮೂಲ್ಯ ಮಾಹಿತಿ ಹಂಚಿಕೊಂಡರು. ಈ ತರಬೇತಿಯಲ್ಲಿ ಒಟ್ಟು 50 ಪಾಲಕರು ಮತ್ತು ಮಕ್ಕಳು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.



ದಿನಾಂಕ 16 ಏಪ್ರಿಲ್ 2026ರಂದು, ಮದರ್ ತೆರೇಸಾ ಆಸ್ಪತ್ರೆ ಚಾರಿಟೇಬಲ್ ಟ್ರಸ್ಟ್ ಹಾಗೂ ಸಹಯೋಗಿ ಸಂಸ್ಥೆಗಳೊಂದಿಗೆ ಕಲಬುರಗಿ ನಗರದ ಸೆಂಟ್ ಮೇರಿ ಸಭಾಂಗಣದಲ್ಲಿ ವಿಶೇಷ ಚೇತನರಿಗೆ ಸಾಧನ ಸಲಕರಣೆಗಳ ವಿತರಣೆ ಕಾರ್ಯಕ್ರಮ ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಫಾದರ್ ಪ್ರವೀಣ್ ಜೋಸೆಫ್ ಅವರು ವಿಶೇಷ ಚೇತನ ಮಕ್ಕಳಿಗೆ ಉತ್ತಮ ಪೌಷ್ಟಿಕ ಆಹಾರ ಹಾಗೂ ಪ್ರೀತಿ-ಕಾಳಜಿಯಿಂದ ಆರೈಕೆ ನೀಡುವ ಮಹತ್ವವನ್ನು ತಿಳಿಸಿದರು. ಫಾದರ್ ಅನೀಲದ ಕ್ರಾಸ್ತ ಅವರು ಸಾಧನ ಸಲಕರಣೆಗಳ ಸರಿಯಾದ ಬಳಕೆ ಹಾಗೂ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಪಾಲಕರಿಗೆ ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 30 ವಿಶೇಷ ಚೇತನರು ಹಾಗೂ ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತರು ಭಾಗವಹಿಸಿದ್ದರು.



ದಿನಾಂಕ 17 ಏಪ್ರಿಲ್ 2026ರಂದು, ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್‌ನ ಸಹಯೋಗದಲ್ಲಿ ಶೀಘ್ರ, ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಡಿ, ಕಲಬುರಗಿ ನಗರದ ಬುದ್ಧನಗರದಲ್ಲಿ ಮಹಿಳೆಯರಿಗೆ ಬೆಳವಣಿಗೆಯಲ್ಲಿ ಕುಂಠಿತತೆ ಹೊಂದಿರುವ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಮಂಜುಳಾ ಅವರು 0 ರಿಂದ 7 ವರ್ಷದ ಮಕ್ಕಳ ಬೆಳವಣಿಗೆಯ ಹಂತಗಳು ಹಾಗೂ ಬೆಳವಣಿಗೆಯಲ್ಲಿ ವಿಳಂಬ ಕಂಡುಬಂದರೆ ಉತ್ತೇಜಕ ಚಟುವಟಿಕೆಗಳ ಮೂಲಕ ಸುಧಾರಣೆ ತರಬಹುದೆಂದು ತಿಳಿಸಿದರು. ಜೊತೆಗೆ ಇಂತಹ ಮಕ್ಕಳು ಕಂಡುಬಂದಲ್ಲಿ ಸಂಸ್ಥೆಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು. ಈ ಕಾರ್ಯಕ್ರಮದಲ್ಲಿ 7 ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## ಸ್ಲಂ ಮಕ್ಕಳಿಗೆ ಸಾಯಂಕಾಲ ಕಲಿಕಾ ಕೇಂದ್ರ





ದಿನಾಂಕ 14 ಏಪ್ರಿಲ್ 2026ರಂದು, ಸೇವಾ ಸಂಗಮ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಸಂಜುನಗರ ಸಾಯಂಕಾಲ ಕಲಿಕಾ ಕೇಂದ್ರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರಬುದ್ಧ ಭಾರತ ಸಂಘಟನೆಯ ಸಹಯೋಗದಲ್ಲಿ ಮಕ್ಕಳಿಗಾಗಿ ಆಟೋಟ ಸ್ಪರ್ಧೆಗಳು, ರಸಪ್ರಶ್ನೆ ಹಾಗೂ ಭಾಷಣ ಸ್ಪರ್ಧೆಗಳನ್ನು ಆಯೋಜಿಸಲಾಯಿತು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮೆಡಲ್, ನೋಟ್‌ಬುಕ್, ಪೆನ್ ಹಾಗೂ ರಾಷ್ಟ್ರೀಯ ನಾಯಕರ ಕುರಿತ ಪುಸ್ತಕಗಳನ್ನು ಬಹುಮಾನವಾಗಿ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕಲಿಕಾ ಕೇಂದ್ರದ ಶಿಕ್ಷಕಿ ರಂಜಿತಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದು, ಒಟ್ಟು 62 ಮಕ್ಕಳಿಗೆ ಬಹುಮಾನಗಳನ್ನು ನೀಡಲಾಯಿತು.



ದಿನಾಂಕ 23 ಏಪ್ರಿಲ್ 2026ರಂದು, ಕಲಬುರಗಿ ಜಿಲ್ಲೆಯ ಸಣ್ಣೂರ ಗ್ರಾಮದಲ್ಲಿ ಸ್ಥಳೀಯ ಮಹಿಳೆಯರಿಗೆ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಯೋಜನೆಯ ಕಾರ್ಯಕರ್ತೆ ಶ್ರೀಮತಿ ದಾಕ್ಷಾಯಿಣಿ ಅವರು 0 ರಿಂದ 6 ವರ್ಷದ ಮಕ್ಕಳ ಬೆಳವಣಿಗೆಯ ಹಂತಗಳು, ಬೆಳವಣಿಗೆಯಲ್ಲಿ ಕುಂಠಿತತೆ ಕಂಡುಬಂದರೆ ಶೀಘ್ರ ಗುರುತಿಸುವ ಮಹತ್ವ ಹಾಗೂ ಉತ್ತೇಜಕ ಚಟುವಟಿಕೆಗಳ ಅಗತ್ಯತೆಯ ಕುರಿತು ಮಾಹಿತಿ ನೀಡಿದರು. ಸರಿಯಾದ ಸಮಯದಲ್ಲಿ ನೆರವು ದೊರೆತರೆ ಮಕ್ಕಳ ಬೆಳವಣಿಗೆಯಲ್ಲಿ ಉತ್ತಮ ಬದಲಾವಣೆ ತರಬಹುದೆಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ 10 ಮಹಿಳೆಯರು ಭಾಗವಹಿಸಿ ಅರಿವು ಪಡೆದುಕೊಂಡರು.

# “ಸಮೃದ್ಧಿ ಕಾರ್ಯಕ್ರಮ”

ದಿನಾಂಕ 24 ಏಪ್ರಿಲ್ 2026ರಂದು, ಕಲಬುರಗಿ ಜಿಲ್ಲೆಯ ಧರ್ಮಪುರ ಗ್ರಾಮದಲ್ಲಿ, ಸೇವಾ ಸಂಗಮ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ಇಂದು ಅವರು ಜ್ಯೋತಿಬಾ ಫುಲೆ ಸಂಘದ ಸದಸ್ಯೆ ಶ್ರೀಮತಿ ಶರಣಮ್ಮ (ಗಂಡ: ನಾಗಪ್ಪ) ಅವರಿಗೆ ಸಮೃದ್ಧಿ ಲೋನ್ ಮೂಲಕ ಸ್ವಉದ್ಯೋಗ ಆರಂಭಿಸಲು ಮಾರ್ಗದರ್ಶನ ನೀಡಿದರು. ಇದರ ಫಲವಾಗಿ ಶ್ರೀಮತಿ ಶರಣಮ್ಮ ಅವರು ₹35,000 ಸಾಲ ಪಡೆದು ಬಟ್ಟೆ ಹೊಲೆಯುವ ಯಂತ್ರವನ್ನು ಖರೀದಿಸಿ, ತಮ್ಮ ಮನೆಯಲ್ಲಿ ವಿವಿಧ ರೀತಿಯ ಬಟ್ಟೆಗಳನ್ನು ಹೊಲೆಯುವ ಮೂಲಕ ಸ್ವಉದ್ಯೋಗ ನಡೆಸುತ್ತಿದ್ದಾರೆ. ಇದರಿಂದ ಅವರು ಪ್ರತಿ ತಿಂಗಳು ಸುಮಾರು ₹7,000 ಆದಾಯ ಗಳಿಸುತ್ತಿದ್ದು, ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು



# “ಸರ್ಶ್ವ ಕಾರ್ಯಕ್ರಮ”

ದಿನಾಂಕ 7 ಏಪ್ರಿಲ್ 2026ರಂದು, ಸೆಂಟ್ ಮೇರಿ ಶಾಲೆಯ ಸಭಾಂಗಣದಲ್ಲಿ 60 ಅಂಗನವಾಡಿ ಕಾರ್ಯಕರ್ತರಿಗೆ ಕ್ಯಾನ್ಸರ್ ಜಾಗೃತಿ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರದಲ್ಲಿ ವಿವಿಧ ರೀತಿಯ ಕ್ಯಾನ್ಸರ್‌ಗಳ ಕುರಿತು ಮಾಹಿತಿ ನೀಡಲಾಗಿದ್ದು, ವಿಶೇಷವಾಗಿ ಸ್ತನ ಕ್ಯಾನ್ಸರ್, ರಕ್ತ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್ ಹಾಗೂ ಗರ್ಭಕಂಠದ ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಕ್ಯಾನ್ಸರ್‌ನಿಂದ ದೂರವಿರಲು ಪೌಷ್ಟಿಕ ಆಹಾರ ಸೇವನೆ, ಹಸಿರು ತರಕಾರಿಗಳು, ಹಣ್ಣುಗಳ ಬಳಕೆ ಹೆಚ್ಚಿಸುವುದು, ಪ್ಲಾಸ್ಟಿಕ್ ಬಳಕೆ ತಪ್ಪಿಸುವುದು ಹಾಗೂ ರಾಸಾಯನಿಕ ಆಹಾರ ಸೇವನೆ ಕಡಿಮೆ ಮಾಡುವುದರ ಮಹತ್ವವನ್ನು ತಿಳಿಸಲಾಯಿತು.



# “ಅನ್ನಪೂರ್ಣೇಶ್ವರಿ ಸಂಘದ ಸದಸ್ಯರಿಗೆ ಕ್ಯಾನ್ಸರ್ ಕುರಿತು ಜಾಗೃತಿ”

ದಿನಾಂಕ 20 ಏಪ್ರಿಲ್ 2026ರಂದು, ಕಲಬುರಗಿ ಜಿಲ್ಲೆಯ ಉದ್ನೂರ್ ಗ್ರಾಮದಲ್ಲಿ, ಸೇವಾ ಸಂಗಮ ಸಂಸ್ಥೆಯ ಮಹಿಳಾ ಸಬಲೀಕರಣ ಕಾರ್ಯಕ್ರಮದ ಅಡಿಯಲ್ಲಿ ಅನ್ನಪೂರ್ಣೇಶ್ವರಿ ಸಂಘದ ಸದಸ್ಯರಿಗೆ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಇಂದು ಅವರು ಕ್ಯಾನ್ಸರ್‌ನ ಲಕ್ಷಣಗಳು, ಗರ್ಭಕೋಶ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಹಾಗೂ ಮದ್ಯಪಾನದಂತಹ ದುಶೀಲಗಳಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳ ಕುರಿತು ಮಾಹಿತಿ ನೀಡಿದರು. ಜೊತೆಗೆ ಕ್ಯಾನ್ಸರ್‌ಗೆ ಲಭ್ಯವಿರುವ ಚಿಕಿತ್ಸೆಗಳ ಬಗ್ಗೆ ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ 15 ಮಹಿಳೆಯರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



# ORBIT NGO

Non-Governmental Organization
Humnaabad, Karnataka

Organization of Bidar Integral Transformation



*Together, we can*

# CREATE A BETTER TOMORROW

Your support helps us **empower lives, build communities** & bring hope.



## SCAN THIS QR CODE TO DONATE

- EMPOWER LIVES
- BUILD COMMUNITIES
- SUPPORT EDUCATION
- CREATE HOPE

*Your Small Act Can Make a Big Difference*

Visit Our Website
**www.orbitbidar.in**

## OUR MISSION

To bring positive and integral transformation in communities through education, empowerment, and sustainable development.

Humnaabad, Bidar District
Karnataka, India

Contact Us
8880843038

# SEVA SANGAMA

Organization for Social Concern Development





## Scan this QR Code

# TO DONATE

**TOGETHER WE CAN**

- SUPPORT EDUCATION
- EMPOWER COMMUNITIES
- IMPROVE LIVELIHOODS
- BUILD A BETTER SOCIETY

*Your Support Creates a Better Tomorrow*

Visit Our Website
**www.sevasangama.in**

“ **Small Act. Big Impact.**
Be the reason someone smiles today.

Together for Compassion
Together for Change
Together for a Better Future

Contact Us
8971119914

Follow Us

# Stay Connected.
# BE THE CHANGE.

**Follow Us. Support Us. Transform Lives.**

Together, we can build a stronger, kinder and empowered society.
Connect with us, follow our journey and be a part of the change.
Your support today creates a **better tomorrow**.

## ORBIT

Organization of
Bidar Integral Transformation

Bidar

**FOLLOW US ON**

- Facebook: @Orbit Bidar- Organization of Bidar Integral Transformation- NGO
- Instagram: @Orbitbidar
- Website: www.orbitbidar.in
- YouTube: @orbithumnabad

**GET IN TOUCH** For Collaborations, Volunteering, Donations & More.

*Let's create impact together!*

## SEVA SANGAMA

Development Society, Kalaburagi

**FOLLOW US ON**

- Facebook: @Sevasangama Kalaburagi Non-Government Organization
- Instagram: @sevasangama01
- Website: www.sevasangama.in
- Phone: 897 111 9914

**GET IN TOUCH** For Collaborations, Volunteering, Donations & More.

*Let's create impact together!*

## BE A PART OF SOMETHING BIGGER!

- Follow our journey
- Support our cause
- Share our mission
- Spread the word
- Make a difference

*Small Actions, Big Impact.*

## TOGETHER WE CAN...

- Empower Lives
- Build Strong Communities
- Create Opportunities
- Inspire Change
- Transform Futures

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ

# ಧರ್ಮಕ್ಷೇತ್ರ ಗುಲ್ಬರ್ಗಾ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೆವೆ. ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

SCAN & DONATE

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

(Only for Indian Citizens)

**Bank Account Details**

DONATE

| | | |
|---|---|---|
| Name | : | Sevasangama Development Society |
| Account No | : | 16040100022902 |
| IFSC Code | : | FDRL0001604 |
| Bank | : | Federal Bank |
| Branch | : | Super Market Kalaburagi |


**Address**

Seva Sangama Development Society,
Near Kendriya Vidyalaya,
Kotnoor D, Kalaburagi, Karnataka-585102

**Contact**
8660968063
9743112739

**Email**
sevasangama2006@gmail.com

*Fr. Victor Anil Vas*
Director, Seva Sangama & ORBIT


Visit Us: www.sevasangama.in